ಅಸಲು ದಾವ ಸಂಖ್ಯೆಃ 643/2017
ಪಿಡಬ್ಲೂ -3

-1-

**ಗೌರವಾನ್ವಿತ 4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ ಬೆಳಗಾವಿ.**

ದಿಃ 14-01-2020 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.
ಪಾಟೀ ಸವಾಲುಃ ಶ್ರೀ MNK ವಕೀಲರಿಂದ.
**(ಸಾಕ್ಷಿಗೆ ಕನ್ನಡ ಭಾಷೆ ಬಾರದ ಕಾರಣ ಮರಾಠಿ ಭಾಷೆ ಬರುತ್ತಿದ್ದು ಶ್ರೀ AAK ವಕೀಲರು ರೂ.100 ಗಳ ವೆಚ್ಚದೊಂದಿಗೆ ಕನ್ನಡ ಭಾಷೆಗೆ ತರ್ಜುಮೆಯನ್ನು ಮಾಡಿರುತ್ತಾರೆ )**

ನಾನು ಸೆಂಟ್ರಲ್ ಹೈಸ್ಕೂಲನಲ್ಲಿ 9 ನೇ ತರಗತಿಯನ್ನು 1966 ರಲ್ಲಿ ಓದಿರುತ್ತೇನೆ. ನಾನು ಕೃಷಿ ಮಾಡುತ್ತೇನೆ. ನಾನು ಕೃಷಿ ಹೊರತು ಪಡಿಸಿ ಬೇರೆ ಯಾವುದೇ ಕೆಲಸ ಮಾಡುವುದಿಲ್ಲ. ನನಗೆ ಕಲಖಾಂಬ ಗ್ರಾಮದಲ್ಲಿ ಅರ್ಧ ಎಕರೆ ಜಮೀನು ಇರುತ್ತದೆ. ನಾನು ನ್ಯಾಯಾಲಯದಲ್ಲಿ ಸಾಕ್ಷ್ಯ ಹೇಳುವ ಅವಶ್ಯಕತೆ ಇದೆ ಎಂದು ವಕೀಲರು ಹೇಳಿರುತ್ತಾರೆ. ನಾನು ಹೊಲದ ಕರಾರಿನ ಕುರಿತು ಸಾಕ್ಷ್ಯ ನುಡಿಯುವ ಬಗ್ಗೆ ಹೇಳಿರುತ್ತಾರೆ. ನನಗೆ ಆ ರೀತಿ ಈ ದಾವೆ ದಾಖಲು ಮಾಡಿದ ನಂತರ ಹೇಳಿರುತ್ತಾರೆ. ಅದಕ್ಕೂ ಮೊದಲು ನನಗೆ ಅದರ ಬಗ್ಗೆ ಮಾಹಿತಿ ಇರಲಿಲ್ಲ. ವಾದಿಯು ಗಣೇಶ ಮಲ್ಪಿ ಪರಪಜ ಸೊಸೈಟಿಯಲ್ಲಿ ಸಂಸ್ಥಾಪಕ ಮತ್ತು ಅಧ್ಯಕ್ಷರಾಗಿರುತ್ತಾರೆ ಎಂದರೆ ಸರಿ . ನಾನು ಸದರಿ ಸಂಘದ ಸದಸ್ಯನಾಗಿದ್ದೇನೆ ಎಂದರೆ ಸರಿ ಹಾಗೆಯೇ ನಾನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಸದಸ್ಯನಾಗಿದ್ದೇನೆ ಎಂದರೆ ಸರಿ. ಸದರಿ ಸಂಘಕ್ಕೆ ಪಿಡಬ್ಲೂ 2 ಅಧ್ಯಕ್ಷರಾಗಿರುತ್ತಾರೆ ಎಂದರೆ ಸರಿ. ಪಿಡಬ್ಲೂ 1 ಮತ್ತು ಪಿಡಬ್ಲೂ 2 ಜೊತೆ ನನ್ನ ಸಂಬಂಧ ಉತ್ತಮವಾಗಿರುತ್ತದೆ ಎಂದರೆ ಸರಿ .

ನ್ಯಾಯಾಲಯದ ಮುಂದೆ ನಾನು ಏನು ಸಾಕ್ಷ್ಯ ಹೇಳಿದ್ದೇನೆ ಎಂದು ಮಾಹಿತಿ ಇಲ್ಲ . ಪ್ರತಿವಾದಿಯು ಕಲಖಾಂಬದಲ್ಲಿ ವಾಸಿಸುತ್ತಾರೆ ಎಂದರೆ ಸರಿ. ನನಗೆ ಇದೆ ಎಂದು ಹೇಳಿದ 20 ಗುಂಟೆ ಜಾಗ ನನ್ನ ಮತ್ತು ನನ್ನ ಸಹೋದರರ ಹೆಸರಿನಲ್ಲಿ ಇದೆ . ಆಸ್ತಿಗೆ ಯಾರು ಮಾಲೀಕರು ಮತ್ತು ಯಾರು ಸ್ವಾಧೀನದಲ್ಲಿ ಇರುತ್ತಾರೆ ಅವರ ಹೆಸರು ಉತಾರದಲ್ಲಿ ನಮೂದ ಆಗಿರುತ್ತದೆ ಎಂದರೆ ಸರಿ . ನಾನು ಪ್ರತಿವಾದಿಯ ಆಸ್ತಿ ಕುರಿತು ಸಾಕ್ಷ್ಯ ನುಡಿಯಲು ಬಂದಿದ್ದು ನನಗೆ ಅದರ ನಂಬರ ಹೇಳಲು ಬರುವುದಿಲ್ಲ. ಪ್ರತಿವಾದಿಗೆ 1 ಎಕರೆಯಲ್ಲಿ $^{1}/_{3}$ ಹಿಸ್ಸೆ ಅಂದಾಜು ಇರಬಹುದು. ನಾನು ಪ್ರತಿವಾದಿಯ ಹೆಸರಿನಲ್ಲಿರುವ ಉತಾರವನ್ನು ನೋಡಿರುವುದಿಲ್ಲ.

ವಾದಿ ಮತ್ತು ಪ್ರತಿವಾದಿಯ ನಡುವೆ ಡಿಸೆಂಬರ 1917 ರಲ್ಲಿ ಕರಾರು ಆಗಿರುತ್ತದೆ. ಸಾಕ್ಷಿಯು ಪುನಃ 2017 ರಲ್ಲಿ ಕರಾರು ಆಗಿರುತ್ತದೆ ಎಂದು ನುಡಿಯುತ್ತಾರೆ. ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಸದರಿ ಕರಾರಿನ ದಿನಾಂಕವನ್ನು ಹೇಳಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ನನಗೆ ಇಂಗ್ಲೀಷ ಬರದ ಕಾರಣ ನಾನು ಓದಿ ನೋಡಿಲ್ಲ . ನಾನು ವಕೀಲರಿಗೆ ನೀಡಿದ ಮಾಹಿತಿಯಂತೆ ನನ್ನ ಸಾಕ್ಷ್ಯ ಪ್ರಮಾಣ ಪತ್ರ ತಯಾರು ಮಾಡಲಾಗಿದೆ . ನಾನು ವಕೀಲರಿಗೆ ಪ್ರತಿವಾದಿಯ ಸರ್ವೆ ನಂಬರ ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ನಮೂದು ಮಾಡಲು ಹೇಳಿರಲಿಲ್ಲ . ಪ್ರತಿವಾದಿಯು ಹಣವನ್ನು ವಾದಿಯಿಂದ ಪಡೆದ ದಿನಾಂಕದ ಬಗ್ಗೆ ನಮ್ಮ ವಕೀಲರಿಗೆ ಮಾಹಿತಿ ನೀಡಿರುತ್ತೇನೆ. ನಾನು ವಕೀಲರಿಗೆ ದಿನಾಂಕಃ 05-03-2003 ರಂದು ರೂ. 50,000-00 ಮುಂಗಡ ಹಣವೆಂದು ವಾದಿ ಪ್ರತಿವಾದಿಗೆ ನೀಡಿರುತ್ತಾರೆ ಎಂದು ಹೇಳಿರುತ್ತೇನೆ. ನಂತರ ವಾದಿಯು ದಿನಾಂಕಃ 04-04-2003 ರಂದು ರೂ. 90,000-00 ಗಳನ್ನು ಪ್ರತಿವಾದಿಗೆ

ನೀಡಿರುತ್ತಾರೆ ಎಂದು ನಮೂದು ಮಾಡಲು ಹೇಳಿರುತ್ತೇನೆ ಎಂದರೆ ಸರಿ . ನನ್ನ ಸಾಕ್ಷ್ಯ ಪ್ರಮಾಣ ಪತ್ರಕ್ಕೆ ನನ್ನ ಸಹಿಯನ್ನು ನ್ಯಾಯಾಲಯದಲ್ಲಿ ಪಡೆಯಲಾಗಿರುತ್ತದೆ. ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಓದಿ ಹೇಳಲಾಗಿದೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ರೂ . 50,000-00 ಮತ್ತು ರೂ. 90,000-00 ನೀಡಿದ ಬಗ್ಗೆ ಬರೆದಿಲ್ಲ ಎಂದರೆ ಸರಿ .

ಒಂದು ವ್ಯವಹಾರ ಆಗಬೇಕಾದರೆ ಖರೀದಿ ಪಡೆಯುವವರ ಮತ್ತು ಮಾರಾಟ ಮಾಡುವವರ ಇಬ್ಬರ ಪರವಾಗಿಯೂ ಸಾಕ್ಷಿದಾರರು ಇರುತ್ತಾರೆ ಎಂದರೆ ಸರಿ . ನಾನು ಉಚಗಾಂವಕರ ರವರ ಕಚೇರಿಯಲ್ಲಿ ರೂ. 100/- ಗಳ ಬಾಂಡ ಪೇಪರನಲ್ಲಿ ಖರೀದಿ ಪತ್ರ ಎಂದು ಬರೆದಿದ್ದ ದಾಖಲೆಗೆ ಸಹಿ ಮಾಡಿರುತ್ತೇನೆ. ನಾನು ಸದರಿ ದಾಖಲೆಗೆ ಒಂದೇ ಸಹಿ ಮಾಡಿರುತ್ತೇನೆ. ಸದರಿ ದಾಖಲೆಗೆ ನಾನು ಮತ್ತು ಪಿಡಬ್ಲ್ಯೂ 2 ಸಹಿ ಮಾಡಿರುತ್ತೇವೆ. ನಾನು ಪ್ರತಿವಾದಿಯು ಅವರ ಆಸ್ತಿಯನ್ನು ವಾದಿಗೆ ಖರೀದಿ ಕೊಟ್ಟಿರುತ್ತಾರೆ ಎಂಬ ಬಗ್ಗೆ ಸಹಿ ಮಾಡಿರುತ್ತೇನೆ . ಸದರಿ ದಾಖಲೆಯನ್ನು ಬರೆಯಲು ಪ್ರತಿವಾದಿಯೇ ಮಾಹಿತಿ ನೀಡಿರುತ್ತಾರೆ . ಸದರಿ ದಾಖಲೆಯನ್ನು ಬರೆಯುವಾಗ ವಾದಿ , ಪ್ರತಿವಾದಿ, ಪಿಡಬ್ಲ್ಯೂ2 ಮತ್ತು ನಾನು ಹಾಜರಿದ್ದೇವು. ಉಚಗಾಂವಕರವರ ಪೂರ್ಣ ಹೆಸರಿನ ಬಗ್ಗೆ ನನಗೆ ಲಕ್ಷ್ಯ ಇಲ್ಲ . ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಉಚಗಾಂವಕರ ಅವರ ಪೂರ್ಣ ಹೆಸರು ಬರೆಯಲು ಮಾಹಿತಿ ನೀಡಿಲ್ಲ . ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ವಾದಿಯು ರೂ. 50,000-00 ಮತ್ತು ರೂ. 90,000-00 ನೀಡಿದ ವೇಳೆಯಲ್ಲಿ ನಾನು ಹಾಜರಿದ್ದೆ ಎಂಬ ಬಗ್ಗೆ ನಮೂದು ಇಲ್ಲ ಎಂದರೆ ಸರಿ.

ದಿಃ 04-04-2003 ರಂದು ಮಧ್ಯಾಹ್ನ 12 ರಿಂದ 1 ರ ಸಮಯದಲ್ಲಿ ಉಚಗಾಂವಕರವರ ಕಚೇರಿಗೆ ಹೋಗಿದ್ದೆ. ನಾನು ಸದರಿಯವರ ಕಚೇರಿಯಲ್ಲಿ ಮಧ್ಯಾಹ್ನ 3-00 ಘಂಟೆಯವರೆಗೆ ಇದ್ದೆ. ಕರಾರಿನ ಸಾಕ್ಷಿದಾರರಿಗೆ ವ್ಯವಹಾರದ ಪೂರ್ಣ ಮಾಹಿತಿ ಇರುತ್ತದೆ ಎಂದರೆ ಸರಿ . ವಾದಿ ಮತ್ತು ಪ್ರತಿವಾದಿಯ ನಡುವೆ ಆದ ಕರಾರಿನಲ್ಲಿ ನಮೂದಿಸಿರುವ ಹಣದ ಬಗ್ಗೆ ಮಾತ್ರ ನಮೂದ ಇರುತ್ತದೆ. ನನಗೆ ಉಳಿಕೆ ವಿಷಯಗಳ ಬಗ್ಗೆ ಮಾಹಿತಿ ಇಲ್ಲ.

ವಾದಿಯು ಈ ದಾವೆಯಂತೆ ಶಿವಾಜಿ ನಿಂಗಪ್ಪ ಸಾವಿ ಎನ್ನುವವರ ಸರ್ವೆ ನಂಬರ 9 ರ ಮೇಲೆಯೂ ದಾವೆ ಹೂಡಿರುತ್ತಾರೆ ಎಂದರೆ ಸರಿ . ಸದರಿ ದಾವೆಯ ಕರಾರು ಪತ್ರದಲ್ಲಿಯೂ ನಾನು ಮತ್ತು ಪಿಡಬ್ಲೂ 2 ಸಾಕ್ಷಿದಾರಾಗಿರುತ್ತೇವೆ ಎಂದರೆ ಸರಿ. ವಾದಿಯು ನನಗೆ ಅನಾನುಕೂಲತೆ ಇದ್ದಾಗ ಮತ್ತು ನಾನು ವಾದಿಗೆ ಅನಾನುಕೂಲತೆ ಇದ್ದಾಗ ಒಬ್ಬರಿಗೊಬ್ಬರು ಸಹಾಯ ಮಾಡುತ್ತೇವೆ ಎಂದರೆ ಸರಿ. ನನ್ನ ಜಮೀನಿಗೆ ಅವಶ್ಯಕತೆ ಬಿದ್ದಾಗ ವಾದಿಯ ಬಳಿಯಿಂದ ನೀರಿನ ಸಹಾಯ ಪಡೆಯುತ್ತೇನೆ. ಪ್ರತಿವಾದಿ ವಾದಿಗೆ ದಾವಾ ಆಸ್ತಿ ಮಾರುವುದಾಗಿ ಎಂದಿಗೂ ಹೇಳಿರುವುದಿಲ್ಲ ಮತ್ತು ಹಣ ಪಡೆದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಪಿಡಬ್ಲೂ 1 ಮತ್ತು ಪಿಡಬ್ಲೂ 2 ಸೇರಿ ಸಾಲ ಪಡೆಯಲು ಪ್ರತಿವಾದಿ ನೀಡಿದ್ದ ಖಾಲಿ ಬಾಂಡ ಪೇಪರನ್ನು ದುರುಪಯೋಗ ಮಾಡಿಕೊಂಡು ಕರಾರು ಪತ್ರ ತಯಾರು ಮಾಡಿರುತ್ತೇವೆ ಎಂದರೆ ಸರಿಯಲ್ಲ. ವಾದಿಗೆ ಸಹಾಯ ಮಾಡುವ ಉದ್ದೇಶದಿಂದ

ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

**(ಸಾಕ್ಷಿಯ ಹೇಳಿಕೆಯನ್ನು ತೆ .ನ್ಯಾ.ದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸರಿಯಿದೆ.**

**ಸಹಿ/-**

**4 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ ನ್ಯಾಯಾಧೀಶರು,**

**ಬೆಳಗಾವಿ.**